ಕ್ರಮ ಸಂಖ್ಯೆ: 748
ವಿಭಾಗ:
ದಿನಾಂಕ: 19/9/22
ನಿರ್ದೇಶಕರು

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2023-24ನೇ ಶೈಕ್ಷಣಿಕ ಸಾಲಿಗೆ ಹೊಸದಾಗಿ ಆಯುಷ್ ಕಾಲೇಜು/ ಕೋರ್ಸ್‌ಗಳನ್ನು ಪ್ರಾರಂಭಿಸಲು / ಪ್ರವೇಶ ಮಿತಿಯನ್ನು ಹೆಚ್ಚಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರಗಳನ್ನು ಒದಗಿಸಲು ವೇಳಾಪಟ್ಟಿ (Calendar of Events) ನಿಗಧಿಪಡಿಸುವ ಬಗ್ಗೆ.

**ಓದಲಾಗಿದೆ:** ಆಯುಕ್ತರು, ಆಯುಷ್ ಇಲಾಖೆ ಇವರ ಪತ್ರ ಸಂಖ್ಯೆ: ಆಯುಷ್/15/ ವೈಶಿ(2)/2022-23, ದಿನಾಂಕ: 26.08.2022.

**ಪ್ರಸ್ತಾವನೆ:**

ಮೇಲೆ ಓದಲಾದ ಆಯುಕ್ತರು, ಆಯುಷ್ ಇಲಾಖೆ ಇವರ ಪ್ರಸ್ತಾವನೆಯಲ್ಲಿ ಸೆಂಟ್ರಲ್ ಕೌನ್ಸಿಲ್ ಆಫ್ ಇಂಡಿಯನ್ ಮೆಡಿಸನ್ (CCIM), ನವದೆಹಲಿ, ಇವರ ಅಧಿಸೂಚನೆ ಸಂಖ್ಯೆ: 11.07.2019ರಲ್ಲಿ ದೇಶದಲ್ಲಿ ಹೊಸದಾಗಿ ಆಯುರ್ವೇದ, ಯುನಾನಿ ಕಾಲೇಜುಗಳನ್ನು ಪ್ರಾರಂಭಿಸಲು, ಹೊಸ ಕೋರ್ಸ್ ಪ್ರಾರಂಬಿಸಲು ಹಾಗೂ ಪ್ರವೇಶ ಮಿತಿಯನ್ನು ಹೆಚ್ಚಿಸಲು ಭಾರತ ಸರ್ಕಾರಕ್ಕೆ ಅರ್ಜಿಗಳನ್ನು ಸಲ್ಲಿಸಲು ಪ್ರತಿ ವರ್ಷ 1ನೇ ಜುಲೈಯಿಂದ 31ನೇ ಆಗಸ್ಟ್ ವರಗೆ ಕಾಲಾವಕಾಶ ಕಲ್ಪಿಸಿ ವೇಳಾಪಟ್ಟಿಯನ್ನು ನಿಗದಿಪಡಿಸಿದ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಆಕುಕ 100 ಪಿಟಿಡಿ 2019, ದಿನಾಂಕ:23.03.2019ರಲ್ಲಿ ಆಯುಷ್ ಕಾಲೇಜು / ಕೋರ್ಸ್‌ಗಳನ್ನು ಪ್ರಾರಂಭಿಸಲು / ಪ್ರವೇಶ ಮಿತಿಯನ್ನು ಹೆಚ್ಚಿಸಲು ಇಚ್ಚಿಸುವ ಸಂಸ್ಥೆಗಳು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ Consent of Affiliation ಪಡೆದ ಬಳಿಕ ಅರ್ಜಿ ಸಲ್ಲಿಸಲು ಮತ್ತು ಸದರಿ ಅರ್ಜಿಗಳ ಮೇಲೆ ಕ್ರಮ ಕೈಗೊಳ್ಳಲು ಹಾಗೂ ಅರ್ಜಿಗಳನ್ನು ಸಲ್ಲಿಸಿರುವ ಸಂಸ್ಥೆಗಳಿಗೆ ರಾಜ್ಯ ಸರ್ಕಾರದಿಂದ ಒದಗಿಸಬೇಕಾದ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವ ಬಗ್ಗೆ ಕೆಳಕಂಡಂತೆ ಕಾಲನಿಗಧಿಗೊಳಿಸುವಂತೆ ಕೋರಿರುತ್ತಾರೆ.

**ಅರ್ಜಿ ಸಲ್ಲಿಕೆ / ಪ್ರಕ್ರಿಯೆ ಕಾಲನಿಗದಿ (Calendar of Events) :-**

| ಕ್ರ.ಸಂ | ವಿವರ | ನಿಗಧಿಪಡಿಸಿದ ದಿನಾಂಕ (ಪ್ರತಿ ವರ್ಷ) | ಷರಾ |
|---|---|---|---|
| 1 | ನಿರಾಕ್ಷೇಪಣಾ ಪ್ರಮಾಣ ಪತ್ರ/ ಅನುಮತಿಗಾಗಿ ಅರ್ಜಿ ಸಲ್ಲಿಸಲು | ಮೇ 01 ರಿಂದ 15ನೇ ತಾರೀಖಿನವರೆಗೆ | ಆಯುಷ್ ಇಲಾಖೆಯ ಹಂತದಲ್ಲಿ |
| 2 | ಸಂಸ್ಥೆಗಳ ಪರಿವೀಕ್ಷಣೆ ಮತ್ತು ಪ್ರಸ್ತಾವನೆ/ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು | ಮೇ 16 ರಿಂದ 31ನೇ ತಾರೀಖಿನವರೆಗೆ | ಆಯುಷ್ ಇಲಾಖೆಯ ಹಂತದಲ್ಲಿ |
| 3 | ಪ್ರಸ್ತಾವನೆ / ವರದಿಯ ಮೇಲೆ ಕ್ರಮಕ್ಕಾಗಿ ಸಮಿತಿಯ ಸಭೆ ಮತ್ತು ಶಿಫಾರಸ್ಸು ಮಾಡಲು | ಜೂನ್ 01 ರಿಂದ 15ನೇ ತಾರೀಖಿನವರೆಗೆ | ಸರ್ಕಾರದ ಹಂತದಲ್ಲಿ |
| 4 | ಶಿಫಾರಸ್ಸಿನ ಮೇಲೆ ನಿರಾಕ್ಷೇಪಣಾ ಪ್ರಮಾಣ ಪತ್ರ / ಅನುಮತಿ ನೀಡಲು | ಜೂನ್ ತಿಂಗಳ 16ನೇ ತಾರೀಖಿನ ನಂತರ | ಸರ್ಕಾರದ ಹಂತದಲ್ಲಿ |

..2/-

ಆಯುಷ್ ಇಲಾಖೆಯಿಂದ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆ / ವರದಿಯನ್ನು ಪರಿಶೀಲಿಸಿ ಸದರಿ ಸಂಸ್ಥೆಗಳಿಗೆ ನಿರಾಕ್ಷೇಪಣಾ ಪ್ರಮಾಣ ಪತ್ರ / ಅನುಮತಿ ನೀಡುವ ಬಗ್ಗೆ ಶಿಫಾರಸ್ಸು ಮಾಡಲು ಉನ್ನತ ಮಟ್ಟದ ಸಮಿತಿಯನ್ನು ರಚಿಸಿ ದಿನಾಂಕ: 23.03.2019ರಂದು ಆದೇಶ ಹೊರಡಿಸಲಾಗಿದೆ.

| ಕ್ರ.ಸಂ | ಹುದ್ದೆ / ಪದನಾಮ | ಸ್ಥಾನ |
|---|---|---|
| 1 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>ವಿಕಾಸ ಸೌಧ, ಬೆಂಗಳೂರು | ಅಧ್ಯಕ್ಷರು |
| 2 | ಆಯುಕ್ತರು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,<br>ಆರೋಗ್ಯ ಸೌಧ, ಬೆಂಗಳೂರು. | ಸದಸ್ಯರು |
| 3 | ಆಯುಕ್ತರು,<br>ಆಯುಷ್ ಇಲಾಖೆ, ಬೆಂಗಳೂರು | ಸದಸ್ಯರು |
| 4 | ಪ್ರಾಚಾರ್ಯರು,<br>ಸರ್ಕಾರಿ ಆಯುರ್ವೇದ / ಹೋಮಿಯೋಪತಿ / ಯುನಾನಿ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು.<br>ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಮಹಾವಿದ್ಯಾಲಯ, ಮೈಸೂರು (ಆಯಾ ಪದ್ಧತಿಯ ಅರ್ಜಿಗಳಿಗೆ ಸಂಬಂಧಪಟ್ಟಂತೆ) | ಸದಸ್ಯರು |
| 5 | ಜಂಟಿ ನಿರ್ದೇಶಕರು (ವೈದ್ಯಕೀಯ ಶಿಕ್ಷಣ)<br>ಆಯುಷ್ ನಿರ್ದೇಶನಾಲಯ, ಬೆಂಗಳೂರು | ಸದಸ್ಯ ಕಾರ್ಯದರ್ಶಿ |

ಮುಂದುವರೆದು, National Commission for Indian Systems of Medicine, ನವದೆಹಲಿ ಇವರ ಪತ್ರ ದಿನಾಂಕ: 17.08.2022ರಲ್ಲಿ 2023-24ನೇ ಸಾಲಿಗೆ ಆಯುಷ್ ಕಾಲೇಜು / ಕೋರ್ಸ್‌ಗಳನ್ನು ಪ್ರಾರಂಭಿಸಲು / ಪ್ರವೇಶ ಮಿತಿಯನ್ನು ಹೆಚ್ಚಿಸಲು ಇಚ್ಚಿಸುವ ಸಂಸ್ಥೆಗಳು ನಿರಾಕ್ಷೇಪಣಾ ಪ್ರಮಾಣ ಪತ್ರಗಳನ್ನು ನಮೂನೆ-4ರಲ್ಲಿ ಸಲ್ಲಿಸಲು ದಿನಾಂಕ: 01.10.2022 ರಿಂದ 31.10.2022ರವರೆಗೆ ಕಾಲಾವಕಾಶ ನಿಗದಿಪಡಿಸಲಾಗಿದ್ದು, ಕಾಲಾವಕಾಶ ಬದಲಾವಣೆಯ ಹಿನ್ನೆಲೆಯಲ್ಲಿ 2023-24ನೇ ಸಾಲಿಗೆ ಆಯುಷ್ ಕಾಲೇಜು / ಕೋರ್ಸಗಳನ್ನು ಪ್ರಾರಂಭಿಸಲು / ಪ್ರವೇಶ ಮಿತಿಯನ್ನು ಹೆಚ್ಚಿಸಲು ಇಚ್ಚಿಸುವ ಸಂಸ್ಥೆಗಳು ನಿರಾಕ್ಷೇಪಣಾ ಪ್ರಮಾಣ ಪತ್ರಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಬೇಕಾಗಿರುವುದರಿಂದ ಪರಿಷ್ಕೃತ ವೇಳಾಪಟ್ಟಿಯನ್ನು ನಿಗದಿಪಡಿಸಿ ಸರ್ಕಾರದ ಆದೇಶ ಹೊರಡಿಸುವಂತೆ ಆಯುಕ್ತರು ಕೋರಿರುತ್ತಾರೆ.

ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ, National Commission for Indian Systems of Medicine, ನವದೆಹಲಿ ಇವರ ಪತ್ರ ದಿನಾಂಕ: 17.08.2022ರಲ್ಲಿ 2023-24ನೇ ಸಾಲಿಗೆ ಆಯುಷ್ ಕಾಲೇಜು / ಕೋರ್ಸ್‌ಗಳನ್ನು ಪ್ರಾರಂಭಿಸಲು / ಪ್ರವೇಶ ಮಿತಿಯನ್ನು ಹೆಚ್ಚಿಸಲು ಇಚ್ಚಿಸುವ ಸಂಸ್ಥೆಗಳು ನಿರಾಕ್ಷೇಪಣಾ ಪ್ರಮಾಣ ಪತ್ರಗಳನ್ನು ನಮೂನೆ-4ರಲ್ಲಿ ಸಲ್ಲಿಸಲು ದಿನಾಂಕ: 01.10.2022 ರಿಂದ 31.10.2022ರವರೆಗೆ ಕಾಲವಕಾಶ ನಿಗದಿಪಡಿಸಲಾಗಿದ್ದು, ಕಾಲಾವಕಾಶ ಬದಲಾವಣೆಯ ಹಿನ್ನೆಲೆಯಲ್ಲಿ 2023-24ನೇ ಸಾಲಿಗೆ ಆಯುಷ್ ಕಾಲೇಜು / ಕೋರ್ಸಗಳನ್ನು ಪ್ರಾರಂಭಿಸಲು / ಪ್ರವೇಶ ಮಿತಿಯನ್ನು ಹೆಚ್ಚಿಸಲು ಇಚ್ಚಿಸುವ ಸಂಸ್ಥೆಗಳು ನಿರಾಕ್ಷೇಪಣಾ

ಪ್ರಮಾಣ ಪತ್ರಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲು ಪರಿಷ್ಕೃತ ವೇಳಾಪಟ್ಟಿಯನ್ನು ನಿಗದಿಪಡಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಆಕುಕ 263 ಪಿಐಎಂ 2022**
**ಬೆಂಗಳೂರು, ದಿನಾಂಕ: 16.09.2022.**

ಪ್ರಸ್ತಾವನೆಯಲ್ಲಿ, ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, National Commission for Indian Systems of Medicine, ನವದೆಹಲಿ ಇವರು 2023-24ನೇ ಸಾಲಿಗೆ ಆಯುಷ್ ಕಾಲೇಜು / ಕೋರ್ಸ್‌ಗಳನ್ನು ಪ್ರಾರಂಭಿಸಲು / ಪ್ರವೇಶ ಮಿತಿಯನ್ನು ಹೆಚ್ಚಿಸಲು ಇಚ್ಛಿಸುವ ಸಂಸ್ಥೆಗಳು ನಿರಾಕ್ಷೇಪಣಾ ಪ್ರಮಾಣ ಪತ್ರಗಳನ್ನು ಸಲ್ಲಿಸಲು ದಿನಾಂಕ: 01.10.2022 ರಿಂದ 31.10.2022ರವರೆಗೆ ಕಾಲಾವಕಾಶ ನಿಗದಿಪಡಿಸಿರುವ ಹಿನ್ನೆಲೆಯಲ್ಲಿ, 2023-24ನೇ ಸಾಲಿಗೆ ಆಯುಷ್ ಕಾಲೇಜು / ಕೋರ್ಸ್‌ಗಳನ್ನು ಪ್ರಾರಂಭಿಸಲು / ಪ್ರವೇಶ ಮಿತಿಯನ್ನು ಹೆಚ್ಚಿಸಲು ಇಚ್ಛಿಸುವ ಸಂಸ್ಥೆಗಳು ನಿರಾಕ್ಷೇಪಣಾ ಪ್ರಮಾಣ ಪತ್ರಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವ ಉದ್ದೇಶಕ್ಕಾಗಿ ಈ ಕೆಳಗಿನಂತೆ ವೇಳಾಪಟ್ಟಿಯನ್ನು ನಿಗದಿಪಡಿಸಿ ಆದೇಶಿಸಿದೆ.

**ಅರ್ಜಿ ಸಲ್ಲಿಕೆ / ಪ್ರಕ್ರಿಯೆ ಕಾಲನಿಗದಿ (Calendar of Events) :-**

| ಕ್ರ.ಸಂ | ವಿವರ | ನಿಗಧಿಪಡಿಸಿದ ದಿನಾಂಕ (ಪ್ರತಿ ವರ್ಷ) | ಷರಾ |
|---|---|---|---|
| 1 | ನಿರಾಕ್ಷೇಪಣಾ ಪ್ರಮಾಣ ಪತ್ರ/ ಅನುಮತಿಗಾಗಿ ಅರ್ಜಿ ಸಲ್ಲಿಸಲು | ಸೆಪ್ಟೆಂಬರ್ 15 ರಿಂದ 30ನೇ ತಾರೀಖಿನವರೆಗೆ | ಆಯುಷ್ ಇಲಾಖೆಯ ಹಂತದಲ್ಲಿ |
| 2 | ಸಂಸ್ಥೆಗಳ ಪರಿವೀಕ್ಷಣೆ ಮತ್ತು ಪ್ರಸ್ತಾವನೆ/ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು | ಸೆಪ್ಟೆಂಬರ್ 30 ರಿಂದ ಅಕ್ಟೋಬರ್ 10ನೇ ತಾರೀಖಿನವರೆಗೆ | ಆಯುಷ್ ಇಲಾಖೆಯ ಹಂತದಲ್ಲಿ |
| 3 | ಪ್ರಸ್ತಾವನೆ / ವರದಿಯ ಮೇಲೆ ಕ್ರಮಕ್ಕಾಗಿ ಸಮಿತಿಯ ಸಭೆ ಮತ್ತು ಶಿಫಾರಸ್ಸು ಮಾಡಲು | ಅಕ್ಟೋಬರ್ 10 ರಿಂದ 15ನೇ ತಾರೀಖಿನವರೆಗೆ | ಸರ್ಕಾರದ ಹಂತದಲ್ಲಿ |
| 4 | ಶಿಫಾರಸ್ಸಿನ ಮೇಲೆ ನಿರಾಕ್ಷೇಪಣಾ ಪ್ರಮಾಣ ಪತ್ರ / ಅನುಮತಿ ನೀಡಲು | ಅಕ್ಟೋಬರ್ 15ನೇ ತಾರೀಖಿನ ನಂತರ | ಸರ್ಕಾರದ ಹಂತದಲ್ಲಿ |
| **ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.** | | | |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

S R Goravar 16/9/2022
**(ಶೈಲಾ ಆರ್.ಗೊರವರ)**
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವೈಪ ಮತ್ತುಸಮನ್ವಯ)

**ಇವರಿಗೆ:-**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ, ಪ್ರಕಟಿತ 50 ಪ್ರತಿಗಳನ್ನು ಒದಗಿಸಲು.

**ಪ್ರತಿ:**

1. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
2. ಆಯುಕ್ತರು, ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು.
3. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು.
4. ಜಂಟಿ ನಿರ್ದೇಶಕರು (ವೈದ್ಯಕೀಯ ಶಿಕ್ಷಣ), ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು.
5. ಪ್ರಾಚಾರ್ಯರು, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಧನ್ವಂತರಿ ರಸ್ತೆ, ಬೆಂಗಳೂರು.
6. ಪ್ರಾಚಾರ್ಯರು, ಸರ್ಕಾರಿ ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯ, ಸಿದ್ದಯ್ಯ ಪುರಾಣಿಕ ರಸ್ತೆ, ಬಸವೇಶ್ವರ ರಸ್ತೆ, ಬೆಂಗಳೂರು.
7. ಪ್ರಾಚಾರ್ಯರು, ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯ, ಸಿದ್ದಯ್ಯ ಪುರಾಣಿಕ ರಸ್ತೆ, ಬಸವೇಶ್ವರ ರಸ್ತೆ, ಬೆಂಗಳೂರು.
8. ರಾಜ್ಯದ ಎಲ್ಲಾ ಆಯುರ್ವೇದ, ಹೋಮಿಯೋಪತಿ, ಯುನಾನಿ ಮತ್ತು ಪ್ರಕೃತಿ ಚಿಕಿತ್ಸಾ ಮತ್ತು ಯೋಗ ಮಹಾವಿದ್ಯಾಲಯಗಳ ಪ್ರಾಶುಂಪಾಲರಿಗೆ (ಆಯುಷ್ ಆಯುಕ್ತರ ಮುಖಾಂತರ)

**ಪ್ರತಿ ಮಾಹಿತಿಗಾಗಿ:-**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ.
3. ಸರ್ಕಾರದ ಜಂಟಿ ಕಾರ್ಯದರ್ಶಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು ವಿಕಾಸ ಸೌಧ.
4. ಶಾಖಾ ರಕ್ಷಾ ಕಡತ

** *